

ಉದಿಸುವ ಸೂರ್ಯನಿಗೆ ಅಗ್ಗಿಷ್ಟಿಕೆಯ ಪ್ರಣಾಮ

ಸೆಲಾ ಪಾಸ್ ಮತ್ತು ತವಾಂಗ್ ನಡುವೆ ನುರಾನಾಂಗ್ ಎಂಬಲ್ಲಿ ಇದೆ. 1962ರ ಯುದ್ಧದಲ್ಲಿ ಜಸ್ವಂತ್ ಸಿಂಗ್ ರಾವತ್ ಎಂಬ ಸೈನಿಕ ಅಕ್ಷರಶ: ಏಕಾಂಗಿ ವೀರನಾಗಿ ನೂರಾರು ಚೀನೀ ಸೈನಿಕರನ್ನು ಬಲಿ ತೆಗೆದುಕೊಂಡು, ಮೂರು ದಿನಗಳು ಶತ್ರುಗಳು ಮುನ್ನುಗ್ಗದಂತೆ ತಡೆಗಟ್ಟಿದ್ದ. ಮಡಿದ ಸೈನಿಕರ ಶವಗಳಿಂದ ಬಂದೂಕು ಸೆಳೆದುಕೊಂಡು ಬಂಕರ್‌ಗಳಿಂದ ಬಂಕರ್‌ಗೆ ತೆವಳುತ್ತಾ ಸಾಗಿ ಅದ್ವಿತೀಯ ಪರಾಕ್ರಮ ಮೆರೆದ ವೀರಯೋಧ. ಇಲ್ಲಿನ ಸ್ಮರಣ ಮಂದಿರದಲ್ಲಿ ಜಸ್ವಂತ್ ಬಳಸುತ್ತಿದ್ದ ವಸ್ತುಗಳನ್ನು ಕಾಪಿಟ್ಟಿದ್ದಾರೆ. ಈ ಹುತಾತ್ಮನ ಸ್ಮರಣಾರ್ಥ ಜಸ್ವಂತ್ ಸೈನಿಕ್ ಇನ್‌ಸ್ಟಿಟ್ಯೂಟ್ ಎಂಬ ತರಬೇತಿ ಕೇಂದ್ರವಿದೆ. ಈ ಸ್ಮರಣ ಮಂದಿರದ ಪಕ್ಕದಲ್ಲಿ ಪ್ರವಾಸಿಗರಿಗೆ ಜಸ್ವಂತ್ ಸ್ಮರಣಾರ್ಥ ಯೋಧರು ಉಚಿತ ಟೀ, ಕಾಫಿ ನೀಡುತ್ತಾರೆ. ಭಾರತ ಸರ್ಕಾರ ಜಸ್ವಂತ್‌ಸಿಂಗ್ ರಾವತ್‌ಗೆ ಮರಣೋತ್ತರ ಪರಮವೀರ ಚಕ್ರ ಪ್ರಶಸ್ತಿಯನ್ನೂ, ಮೇಜರ್ ಜನರಲ್ ಹುದ್ದೆಯನ್ನೂ ನೀಡಿ ಗೌರವಿಸಿತ್ತು.

ನುರಾನಾಂಗ್ ಬಳಿ ಜಂಗ್ ಫಾಲ್ಸ್ ಇದೆ. ಎರಡು ಹಂತಗಳಲ್ಲಿ ನೂರು ಮೀ. ಎತ್ತರದಿಂದ ನೀರು ಧುಮುಕುತ್ತದೆ. ಸೆಲಾ ಸರೋವರದಲ್ಲಿ ನುರಾನಾಂಗ್ ನದಿ ಹುಟ್ಟಿ ಜಂಗ್ ಎಂಬ ಸ್ಥಳದ ಬಳಿ ಧುಮುಕಿ ಜಂಗ್ ಫಾಲ್ಸ್ ಎನಿಸಿಕೊಳ್ಳುತ್ತದೆ. ಈ ಜಲಪಾತ ಮತ್ತು ನುರಾನಾಂಗ್ ಹರಿವಿನ ಸನ್ನಿವೇಶ ಚೌಕಟ್ಟಿನಲ್ಲಿ ಬರೆದ ತೈಲವರ್ಣ ಚಿತ್ರದಂತೆ ಮನಮೋಹಕವಾಗಿದೆ.

## ದಲೈಲಾಮಾ ಹುಟ್ಟಿದ ಮನೆ

ಇದೇ ಜಂಗ್ ಫಾಲ್ಸ್ ಸಮೀಪವೇ ಆರನೇ ದಲೈಲಾಮ ಹುಟ್ಟಿದ ಮನೆ ಇದೆ. ಪ್ರಸ್ತುತದ ಹದಿನಾಲ್ಕು ಮಂದಿ ದಲೈಲಾಮ ಪರಂಪರೆಯಲ್ಲಿ ಆರನೆಯವರು ಮಾತ್ರ ತವಾಂಗ್‌ನಲ್ಲಿ ಹುಟ್ಟಿರುವುದು. ಉಳಿದವರೆಲ್ಲ ಟಿಬೆಟ್‌ನವರು. ಈ ಮನೆ, ಮನೆಯ ಪರಿಸರ ನಮ್ಮ ಮಲೆನಾಡ ಹಳ್ಳಿಮನೆಯಂತಿದ್ದು ಆತ್ಮೀಯತೆ ಹುಟ್ಟಿಸಿತು.

ತವಾಂಗ್‌ನಿಂದ 37ಕಿ.ಮೀ. ದೂರದಲ್ಲಿರುವ ಬುಮ್‌ಲಾ ಪಾಸ್ ಹಲವು ಚಾರಿತ್ರಿಕ ಘಟನೆಗಳಿಗೆ ಸಾಕ್ಷಿಯಾಗಿರುವ ಸ್ಥಳ. ಇಲ್ಲಿಗೆ ಟಾಟಾ ಸುಮೋದಲ್ಲಿ ಹೊರಟೆವು. ಇಲ್ಲಿಗೆ ಹೋಗಲು ಜಿಲ್ಲಾಧಿಕಾರಿ ಹಾಗೂ ಸೇನೆಯ ಅನುಮತಿ ಬೇಕು. ಭಾರತ ಚೀನಾ ಗಡಿಯ ವಿವಾದಿತ ಮ್ಯಾಕ್‌ಮೋಹನ್ ರೇಖೆ ಇಲ್ಲೇ ಹಾದು ಹೋಗಿರುವುದು. ಚೀನಾ ಟಿಬೆಟನ್ನು ಆಕ್ರಮಿಸಿದಾಗ ಆಶ್ರಯ ಬಯಸಿ ಬಂದ ದಲೈಲಾಮಾರವರು ಇಲ್ಲಿಂದಲೇ ಭಾರತ ಪ್ರವೇಶಿಸಿದ್ದರು. ಇಂಡೋ ಚೀನಾ ನಡುವಣ ಭೀಕರ ಯುದ್ಧ ನಡೆದದ್ದು ಇಲ್ಲಿಯೇ.

ದಾರಿಯಲ್ಲಿ ಅಲ್ಲಲ್ಲಿ ಮಿಲಿಟರಿ ಬಂಕರ್‌ಗಳು. ಕರಂ ಧರಂ ಹೈ, ಗನ್–ಗಟ್ಸ್– ಎಂಡ್ ಗ್ಲೋರಿ, ಭಗವಾನ್ ಹಮೇಶಾ ಮದದ್ ಕರ್ತಾ ಹೈ... ಮುಂತಾದ ವಾಕ್ಯಗಳ ಫಲಕಗಳು ಹೆಜ್ಜೆ ಹೆಜ್ಜೆಗೂ ಕಾಣಿಸುತ್ತವೆ. ಕೆಲವೆಡೆಯ ದಾರಿ ಭಯಾನಕವಾಗಿದೆ. ರಸ್ತೆ ನಿರ್ವಹಿಸುತ್ತಿರುವ ಬಿಆರ್‌ಓ ಪಡೆಯಲ್ಲಿ ಅರ್ಧಕ್ಕಿಂತ ಹೆಚ್ಚು ಕಾರ್ಮಿಕರು ಮಹಿಳೆಯರೇ. ಕೆಲವರು ಬೆನ್ನಿಗೆ ಮಗುವನ್ನು ಕಟ್ಟಿಕೊಂಡು ದುಡಿಯುತ್ತಿದ್ದರು. ಒಂದೆಡೆ ವಿರಾಮಕ್ಕಾಗಿ ಕುಳಿತಿದ್ದ ಕೆಲವರ ಕೈಗಳು ಉಲ್ಲನ್ ಕ್ರೋಷಾಕಡ್ಡಿಯೊಂದಿಗೆ ಹೆಣಿಗೆ ಮಾಡುತ್ತಿದ್ದವು.

ಬುಮ್‌ಲಾ ಪಾಸ್ ತಲುಪುತ್ತಲೇ ಕನ್ನಡಿಗ ಯೋಧ ಸಂತೋಷ್ ನಮ್ಮತ್ತ ಧಾವಿಸಿ ಬಂದು ಪ್ರೀತಿಯಿಂದ ಮಾತಾಡಿಸಿದರು. ಇಲ್ಲಿನ ಕಡು ಕಷ್ಟದ ಪರಿಸ್ಥಿತಿಯ ಕುರಿತು ನಾವು ಅನುಕಂಪದ ಮಾತಾಡ ಹೊರಟರೆ, ‘ಅಯ್ಯೊ, ನಮಗೆಲ್ಲ ತರಬೇತಿ ಇದೆ ಬಿಡಿ’ ಎಂದರು. ನಂತರ ಗಡಿಭಾಗದಲ್ಲಿ ಇನ್ನೊಬ್ಬ